

# ಮಾನವ ಗೋಪುರ!

ಒಬ್ಬರ ಹೆಗಲ ಮೇಲೆ ಒಬ್ಬರು. ಅವರ ಹೆಗಲಿನ ಮೇಲೆ ಇನ್ನೊಬ್ಬರು. ಹೀಗೆ ಎತ್ತರೆತ್ತರದ ಮಾನವ ಗೋಪುರ ನಿರ್ಮಾಣ ಒಂದು ಸ್ಪರ್ಧೆಯಾಗಿ ರೂಪುಗೊಂಡಿರುವುದು ಸ್ಪೇನಿನ ಕ್ಯಾಟಲೋನಿಯಾದಲ್ಲಿ. ಕಳೆದ 25 ವರ್ಷಗಳಿಂದಲೂ (ಅಕ್ಟೋಬರ್ ತಿಂಗಳಲ್ಲಿ) ಅಲ್ಲಿ ನಡೆದುಕೊಂಡು ಬರುತ್ತಿರುವ ಈ ಸ್ಪರ್ಧೆಯ ನಿಯಮವೆಂದರೆ ಕಳೆದ ವರ್ಷದ ವಿಜೇತ ತಂಡಕ್ಕಿಂತ ಮುಂದಿನ ವರ್ಷದ ತಂಡದ ಗೋಪುರ ಎತ್ತರವಿರಬೇಕು ಎಂಬುದು. ಕಳೆದ ಸಾಲಿನಲ್ಲಿ ಗೆದ್ದ ಗೋಪುರದ ಎತ್ತರ 12 ಮೀಟರುಗಳಿದ್ದರೆ ಅಗಲ ಎರಡು ಮೀಟರುಗಳಷ್ಟು ಇತ್ತು.

ಗೋಪುರದ ಬುಡದಲ್ಲಿ ಹಲವರು ನಿಂತು ಮೇಲಿದ್ದವರಿಗೆ ಹೆಗಲು ಕೊಡುತ್ತಾರೆ. ಗೋಪುರದಿಂದ ಉರುಳಿ ಬೀಳುವುದು ಸಾಮಾನ್ಯವಾದರೂ ಅವರಿಗೆ ತಕ್ಷಣ ಚಿಕಿತ್ಸೆ ನೀಡಲು ತಜ್ಞ ವೈದ್ಯರ ತಂಡ ಕಾದು ನಿಲ್ಲುತ್ತದೆ. ಆಟ ನೋಡಲು ಪ್ರವೇಶ ಧನ ಕೂಡ ಇದೆ. ಬೇರೆ ದೇಶಗಳಿಂದಲೂ ಸ್ಪರ್ಧಾಳುಗಳು ಬರುವ ಕಾರಣ ಗೆದ್ದ ಸಾಹಸಿಗಳ ದೇಶದ ಧ್ವಜ ಅರಳಿಸುವ ಸಂಪ್ರದಾಯವಿದೆ.

■ ಪ.ರಾಮಕೃಷ್ಣ ಶಾಸ್ತ್ರಿ

